**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 820/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಮತ |
| ಗಂಡನ ಹೆಸರು | : | ಸುನಿಲ್ ಕುಮಾರ್ |
| ವಯಸ್ಸು | : | 21 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಚಿಕ್ಕೆರೆಯೂರು ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 28.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

1 ನೇ ಆರೋಪಿ ನನಗೆ ತಾಯಿಯಾಗಬೇಕು. 2 ರಿಂದ 4 ನೇ ಆರೋಪಿಗಳು ಯಾರು ಎಂದು ನನಗೆ ಗೊತ್ತಿಲ್ಲ. 2020 ರಲ್ಲಿ ನಮ್ಮ ಮನೆಯಲ್ಲಿ ನನ್ನ ಅಕ್ಕನ ಮಗನ ನಾಮಕರಣವಿತ್ತು. ನನಗೆ ಯಾವುದೇ ಬಾಲ್ಯ ವಿವಾಹವಾಗಿರುವುದಿಲ್ಲ. 2020 ರಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಅವರ ಜೊತೆ ಮತ್ತೊಬ್ಬರು ಬಂದು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಂತರ ನನ್ನನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಕಛೇರಿಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನಿ.ಪಿ.-1 ರಂತೆ ಹೇಳಿಕೆ ನೀಡಿರುತ್ತೇನೆ. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನನ್ನನ್ನು ಬಾಲಮಂದಿರಕ್ಕೆ ಕರೆದುಕೊಂಡು ಹೋಗಿ ಬಿಟ್ಟಿರುತ್ತಾರೆ. ನಾನು ಯಾವುದೇ ಬಾಲ್ಯ ವಿವಾಹವಾಗಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕಃ 16.04.2020 ರಂದು 2 ನೇ ಆರೋಪಿಯ ಜೊತೆ ನನ್ನ ಮದುವೆಯಾಗಿರುತ್ತದೆಂದರೆ ಸರಿಯಲ್ಲ. ನನ್ನ ಬಾಲ್ಯ ವಿವಾಹವಾಗಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಬಿ.ಎಸ್.ಯು. ವಕೀಲರಿಂದಃ**

ನನ್ನ ಹೇಳಿಕೆಯನ್ನು ಚಾಸಾ-1 ರವರೇ ಹೇಳಿ ಬರೆಸಿಕೊಂಡಿರುತ್ತಾರೆಂದರೆ ಸರಿ. ಚಾಸಾ-1 ರವರೇ ಬಲವಂತವಾಗಿ ಸಾಂತ್ವಾನ ಕೇಂದ್ರಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ತಾತ ಯಾವುದೇ ಮದುವೆಯಾಗಿರುವುದಿಲ್ಲವೆಂದು ಹೇಳಿದ್ದರೂ ಕೂಡ ಒತ್ತಾಯ ಪೂರ್ವಕವಾಗಿ ನನ್ನನ್ನು ಸಾಂತ್ವಾನ ಕೇಂದ್ರದಲ್ಲಿ ಇರಿಸಿಕೊಂಡಿದ್ದರು ಎಂದರೆ ಸರಿ. ನಾನು 2 ನೇ ಆರೋಪಿಯನ್ನು ಯಾವತ್ತೂ ಮದುವೆಯಾಗಿರುವುದಿಲ್ಲವೆಂದರೆ ಸರಿ.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿಗಳ ಪರ ಶ್ರೀ. ಎಂ.ಎಸ್.ಕೆ..ವಕೀಲರಿಂದಃ**

ಈ ಮೇಲಿನ ಪಾಟೀ ಸವಾಲನ್ನೇ ಅವಲಂಭಿಸಿರುತ್ತಾರೆ.

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**